**O.S.No.3504/2007**
**C/w 3505/2007**
**CW1**

**5 ನೇ ಅಧಿಕ ಬೆಂಗಳೂರು ನಗರ ದಿವಾಣಿ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬೆಂಗಳೂರು.**

**ಮೂಲ ದಾವೆ ಸಂ.3504/2007 C/w 3505/2007**

**ಸಿಡಬ್ಲ್ಯೂ-1**

| | | |
|---|---|---|
| **ಸಾಕ್ಷಿಯ ಹೆಸರು** | : | **ಶ್ರೀನಿವಾಸ್** |
| **ತಂದೆಯ ಹೆಸರು** | : | **ತಿರುಮಲನಾಯಕ್** |
| **ವಯಸ್ಸು** | : | **33 ವರ್ಷ** |
| **ಉದ್ಯೋಗ** | : | **ಸರ್ವೇಯರ್, ಎಡಿಎಲ್ಆರ್ ಕಛೇರಿ, ಬೆಂಗಳೂರು ದಕ್ಷಿಣ ತಾಲ್ಲೂಕು.** |
| **ವಾಸ** | : | **ಬೆಂಗಳೂರು.** |

**ದಿನಾಂಕಃ 22.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ನ್ಯಾಯಾಲಯದಿಂದಃಃ**

ನಾನು 2021 ರಿಂದ ಬೆಂಗಳೂರು ದಕ್ಷಿಣ ತಾಲ್ಲೂಕಿನ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಯಲ್ಲಿ ಸರ್ವೇಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ 02.08.2022 ರಂದು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ನನಗೆ ಒಂದು ಅಧಿಕೃತ ಜ್ಞಾಪನವನ್ನು ಹಾಗೂ ಅದರ ಲಗತ್ತು ದಾಖಲೆಗಳಾದ ಉಭಯ ಪಕ್ಷಗಾರರ Memo of Instructions, Commissioner Warrant, ಮಧ್ಯಂತರ ಅರ್ಜಿಯ ನಕಲು ಹಾಗೂ ವಾದಿಯು ಸಲ್ಲಿಸಿದ್ದ ದಾಖಲೆಗಳ ಪಟ್ಟಿ ಮತ್ತು ಅದರ ಲಗತ್ತು ದಾಖಲೆಗಳ ಜೆರಾಕ್ಸ್ ನೀಡಿ ನ್ಯಾಯಾಲಯದ ಆದೇಶದ ಪ್ರಕಾರ ಸರ್ವೆ ಹಾಗೂ ಭೂ ಸ್ವಾಧೀನಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆದು ಅಳತೆ ಕಾರ್ಯ ಪೂರೈಸಿ

ವರದಿ ನೀಡುವಂತೆ ನಿರ್ದೇಶಿಸಿದ್ದರು. ಭೂ ದಾಖಲೆಗಳ ಸಹಾಯಕ ನಿರ್ದೇಶಕರು ನನಗೆ ನೀಡಿದ್ದ ಅಧಿಕೃತ ಜ್ಞಾಪನ ಹಾಗೂ ಅದರ ಎಲ್ಲಾ ಲಗತ್ತು ದಾಖಲೆಗಳನ್ನು **ನಿಸಿ-1** ಎಂದು ಗುರುತಿಸಿದ್ದೇನೆ. ದಿನಾಂಕ 12.08.2022 ರಂದು ವಾದಿಗಳಿಗೆ ಹಾಗೂ ಪ್ರತಿವಾದಿಗಳಿಗೆ ದಿನಾಂಕ 22.08.2022 ರಂದು ಬೆಳಿಗ್ಗೆ 11 ಗಂಟೆಗೆ ಕೋರ್ಟ್ ಕಮಿಷನ್ ಅಳತೆ ಕಾರ್ಯವನ್ನು ನಿರ್ವಹಿಸುವ ಬಗ್ಗೆ ತಿಳುವಳಿಕೆ ಪತ್ರವನ್ನು ನೀಡಿರುತ್ತೇನೆ. ಸದರಿ ತಿಳುವಳಿಕೆ ಪತ್ರವನ್ನು ಜಾರಿಗೊಳಿಸಿರುವ ಬಗ್ಗೆ ವಾದಿಗಳ ಹಾಗೂ 1 ನೇ ಪ್ರತಿವಾದಿಯ ಸಹಿಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ತಿಳುವಳಿಕೆ ಪತ್ರವನ್ನು **ನಿಸಿ-2** ಎಂದು ಗುರುತಿಸಿದ್ದೇನೆ.

ದಿನಾಂಕ 22.08.2022 ರಂದು ಬೆಳಿಗ್ಗೆ 11 ಗಂಟೆಗೆ ನಾನು ಕೋರ್ಟ್ ಕಮೀಷನ್ ಅಳತೆ ಕಾರ್ಯವನ್ನು ನಿರ್ವಹಿಸಲು ಸಂಬಂಧಪಟ್ಟ ಸ್ವತ್ತಿಗೆ ಹೋಗಿರುತ್ತೇನೆ. ನಾನು ಕರ್ತವ್ಯಕ್ಕೆ ಹೋಗುವಾಗ ಮೆಟ್ರೋಗಾಗಿ ಭೂ ಸ್ವಾಧೀನ ಪಡಿಸಿಕೊಂಡ ಸ್ವತ್ತಿನ ನಕ್ಷೆಯ ಪ್ರತಿ, ರಾಷ್ಟ್ರೀಯ ಹೆದ್ದಾರಿಗಾಗಿ ಭೂ ಸ್ವಾಧೀನದ ಅಧಿಸೂಚನೆಗಳ ಪ್ರತಿಗಳನ್ನು, ಎಂ.ಆರ್ ನ ದೃಢೀಕೃತ ನಕಲು, ಪರಿಹಾರ ವಿತರಣಾ ವಹಿಯ ನಕಲು, ರಾಷ್ಟ್ರೀಯ ಹೆದ್ದಾರಿಗೆ ಭೂ ಸ್ವಾಧೀನ ಪಡಿಸಿಕೊಂಡ ನಕ್ಷೆಯ ಪ್ರತಿಗಳನ್ನು ಕಛೇರಿಯಿಂದ ಪಡೆದುಕೊಂಡು ಹೋಗಿರುತ್ತೇನೆ. ಸದರಿ ದಾಖಲೆಗಳನ್ನು **ನಿಸಿ-3 ರಿಂದ ನಿಪಿ-9** ಎಂದು ಗುರುತಿಸಿದ್ದೇನೆ. ನಂತರ ಸ್ಥಳದ ವಾದಿಗಳ ಮತ್ತು ಪ್ರತಿವಾದಿಗಳ ಪರವಾಗಿ ಸಲ್ಲಿಸಿದ್ದ Memo of Instructions ಪ್ರಕಾರ ಅಳತೆ ಕಾರ್ಯವನ್ನು ಪೂರೈಸಿರುತ್ತೇನೆ. ಸದರಿ ಅಳತೆ ಕಾರ್ಯದ ಸಮಯದಲ್ಲಿ ನಕ್ಷೆಯನ್ನು ತಯಾರಿಸಿರುತ್ತೇನೆ. ಸದರಿ ನಕ್ಷೆಯನ್ನು **ನಿಸಿ-10** ಎಂದು ಗುರುತಿಸಿದ್ದೇನೆ. ಸ್ಥಳದಲ್ಲಿ ಮಹಜರು ಮಾಡಿದ್ದು ಅದನ್ನು **ನಿಸಿ-11**

ಎಂದು ಗುರುತಿಸಿದ್ದೇನೆ. ಅಳತೆ ಕಾರ್ಯದ ಸಮಯದಲ್ಲಿ ಫೋಟೋಗಳನ್ನು ತೆಗೆದಿದ್ದು ಸದರಿ ಫೋಟೋಗಳನ್ನು ಒಟ್ಟಾಗಿ **ನಿಸಿ-12** ಎಂದು ಗುರುತಿಸಿದ್ದೇನೆ. ನಂತರ ವಾದಿ ಮತ್ತು ಪ್ರತಿವಾದಿಗಳ Memo of Instructions ಗಳಿಗೆ ಕಂಡಿಕೆವಾರು ಉತ್ತರಗಳನ್ನು ನೀಡಿರುತ್ತೇನೆ. ಅವುಗಳನ್ನು ಕ್ರಮವಾಗಿ **ನಿಸಿ-13 ಹಾಗೂ ನಿಪಿ-14** ಎಂದು ಗುರುತಿಸಿದ್ದೇನೆ. ನಂತರ ಭೂ ದಾಖಲೆಯ ಸಹಾಯಕ ನಿರ್ದೇಶಕರಿಗೆ ವರದಿಯನ್ನು ನೀಡಿರುತ್ತೇನೆ. ಸದರಿ ವರದಿಯನ್ನು **ನಿಸಿ-15** ಎಂದು ಗುರುತಿಸಿದ್ದೇನೆ.

**ಪಾಟೀ ಸವಾಲುಃಃ ವಾದಿಗಳ ಪರ ವಕೀಲರಿಂದಃಃ**

ಕೋರಿಕೆ ಮೇರೆಗೆ ಮುಂದೂಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ )

ಓ.ಹೇ.ಕೇ. ಸರಿ.ಇದೆ.

**(ವೇದ ಮೂರ್ತಿ ಬಿ.ಎಸ್)**
(ಪ್ರಭಾರ) 5 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ.